**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ.ದಂ.ನ್ಯಾಯಾಲಯ,**

**ಶಹಾಪೂರ**

RW.1

Crl. Misc. 178//2024

**ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು ದಿನಾಂಕಃ 19-02-2026.**
**ಪಾಟಿ ಸವಾಲು ಅರ್ಜಿದಾರರ ಪರ ಶ್ರೀ ASD ಮಾನ್ಯ ವಕೀಲರಿಂದ:**

ಅರ್ಜಿದಾರರು ನಮ್ಮ ಸಂಬಂಧಿಕರಾಗಿದ್ದು ನಮ್ಮ ಸಂಬಂಧಿಕರಲ್ಲೆ ಮದುವೆಯಾಗಿರುತ್ತದೆ ಎಂದರೆ ಸರಿ. ನಾನು ಹಾಗೂ ಅರ್ಜಿದಾರರು ಮದುವೆಯಾಗಿ ಸುಮಾರು 12 ವರ್ಷಗಳವರೆಗೆ ಅನ್ಯೋನ್ಯವಾಗಿ ವೈವಾಹಿಕ ಜೀವನವನ್ನು ಮಾಡಿರುತ್ತೇವೆ ಎಂದರೆ ಸರಿ. ಸದರಿ ಮದುವೆಯ ಸಂದರ್ಭದಲ್ಲಿ ಅರ್ಜಿದಾರರ ತಾಯಿ ನನಗೆ ಎರಡು ತೊಲೆ ಬಂಗಾರ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಬಂಗಾರವನ್ನು ಕೊಟ್ಟಿದ್ದರೂ ಕೂಡಾ ನಾನು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣವನ್ನು ಸಲ್ಲಿಸುವ 2 ವರೆ ವರ್ಷಗಳ ಮುಂಚಿತದಿಂದ ಅರ್ಜಿದಾರರು ತಮ್ಮ ತವರು ಮನೆಯಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿ. ಸದರಿ 2 ವರೆ ವರ್ಷಗಳಲ್ಲಿ ನಾನು ಅರ್ಜಿದಾರರ ಉಪ ಜೀವನಕ್ಕೆ ಯಾವುದೇ ಹಣವನ್ನು ಕೊಟ್ಟಿರುವುದಿಲ್ಲ ಎಂದರೆ ಸರಿ. ನಾನು ಅರ್ಜಿದಾರರಿಗೆ ಅವರು ತವರು ಮನೆಯಿಂದ ಹೆಚ್ಚಿನ ಬಂಗಾರ ಹಾಗೂ ಹಣವನ್ನು ತರಲು ದೈಹಿಕ ಹಾಗೂ ಮಾನಸಿಕ ಹಿಂತೆ ಮಾಡಿ ನನ್ನ ಮನೆಯಿಂದ ಅವರನ್ನು ಹೊರ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಾನು ಅರ್ಜಿದಾರರಿಗೆ ಹೊಡೆ ಬಡೆ ಮಾಡಿದ್ದರಿಂದ ಹಾಗೂ ವರದಕ್ಷಿಣೆ ಕಿರುಕುಳ

ಕೊಟ್ಟಿದ್ದರಿಂದ ಅರ್ಜಿದಾರರು ನನ್ನ ವಿರುದ್ದ ದೂರನ್ನು ಸಲ್ಲಿಸಿದ್ದು ಅದರ ಪ್ರಕರಣ ಈ ನ್ಯಾಯಾಲಯದಲ್ಲಿ ಇತ್ಯರ್ಥಕ್ಕೆ ಬಾಕಿ ಇರುತ್ತದೆ ಎಂದರೆ ಸರಿ.

2. ಶ್ರೀಮತಿ ಲಕ್ಷ್ಮೀ ಎನ್ನುವವರ ಪರಿಚಯ ನನಗೆ ಇರುವುದಿಲ್ಲ. ನಾನು ಸದರಿ ಲಕ್ಷ್ಮೀ ಇವರೊಂದಿಗೆ 2 ನೇ ಮದುವೆಯಾಗಿರುತ್ತೇನೆ ಎಂದರೆ ಸರಿಯಲ್ಲ. ಅಪರ ದಿವಾನಿ ನ್ಯಾಯಾಲಯ ಶಹಾಪೂರಿನಲ್ಲಿ ಅರ್ಜಿದಾರರು ನನ್ನ ವಿರುದ್ದ ಒಂದು ಖಾಸಗಿ ದೂರನ್ನು ನಾನು 2 ನೇ ಮದುವೆಯಾಗಿರುತ್ತೇನೆ ಎಂದು ಹೇಳಿ ಸಲ್ಲಿಸಿರುತ್ತಾರೆ ಎಂದರೆ ಸರಿ. ನಾನು ಸದರಿ ಪ್ರಕರಣದಲ್ಲಿ ಜಾಮೀನನ್ನು ಪಡೆದುಕೊಂಡಿರುತ್ತೇನೆ ಹಾಗೂ ಸದರಿ ಪ್ರಕರಣ ಇನ್ನು ಇತ್ಯರ್ಥಕ್ಕೆ ಬಾಕಿ ಇರುತ್ತದೆ ಎಂದರೆ ಸರಿ. ಸದರಿ ಪ್ರಕರಣದ ಸಂಖ್ಯೆ CC 1199/2024 ಆಗಿರುತ್ತದೆ ಎಂದರೆ ಸರಿ. ಸಾಕ್ಷಿಗೆ ಈ ಒಂದು ಪೊಟೋವನ್ನು ತೋರಿಸಿ ಅದರರಲ್ಲಿ ಕಾಣುತ್ತಿರುವರು ನೀವು ಹಾಗೂ ಸದರಿ ಲಕ್ಷ್ಮೀ ಆಗಿರುತ್ತೀರಾ ಎಂದು ಹೇಳಿದ್ದಕೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ಸದರಿ ದಾಖಲೆಯನ್ನು ನಿಪಿ.3 ಎಂದು ಗುರುತಿಸಲಾಯಿತು. ಸದರಿ ಲಕ್ಷ್ಮೀ ಇವರಿಂದ ಒಂದು ಮಗು ಇರುತ್ತದೆ ಎಂದರೆ ಸರಿ.

3. ತರ್ಕಾಸಪೇಟ ಗ್ರಾಮದಲ್ಲಿ ನನ್ನ ತಾಯಿಯ ಹೆಸರಿನಲ್ಲಿ ಸ.ನ. 210 ಕ್ಷೇತ್ರ 02 ಎಕರೆ ಇರುತ್ತದೆ ಎಂದರೆ ಸರಿ. ಸ.ನಂ.228 ಕ್ಷೇತ್ರ 06 ಎಕರೆ 13 ಗುಂಟೆ ಸುಗೂರು ಗ್ರಾಮದಲ್ಲಿ ನನ್ನ ದೊಡ್ಡಪ್ಪನ ಮಗನ ಹೆಸರಿನಲ್ಲಿರುತ್ತದೆ. ಸದರಿ ಜಮೀನಿನಲ್ಲಿ ನನಗೆ ಯಾವುದೇ ಪಾಲು ಇರುವುದಿಲ್ಲ. ಸದರಿ ಜಮೀನಲ್ಲಿ ನನಗೆ ಅರ್ಧ ಪಾಲು ಇದ್ದರೂ ಕೂಡಾ ಅರ್ಜಿದಾರರಿಗೆ ಜೀವನಾಂಶ ಕೊಡಬೇಕಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೊಲಗಳಿಂದ ನಮಗೆ ಸುಮಾರು ರೂ.8,00,000/- ಆದಾಯ ಪ್ರತಿ ವರ್ಷ ಬರುತ್ತದೆ ಎಂದರೆ ಸರಿಯಲ್ಲ. ನಾನು ಖಾಸಗಿಯಾಗಿ ಚಾಲಕ

ವೃತ್ತಿಯನ್ನು ಮಾಡಿಕೊಂಡಿದ್ದು ಪ್ರತಿ ತಿಂಗಳು ರೂ.20,000/- ಆದಾಯವನ್ನು ಹೊಂದಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಸಾಕಷ್ಟು ಆದಾಯ ಇದ್ದರೂ ಕೂಡಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಅರ್ಜಿದಾರರು ರೆಡ್ಡೆಪ್ಪ ತಂದೆ ಸಾಬಣ್ಣ ಎನ್ನುವವರ ಜೊತೆ ಮಾತನಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಜೀವನಾಂಶ ಕೊಡಬೇಕಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 2 ನೇ ಮದುವೆಯಾಗಿದ್ದರಿಂದ ಅರ್ಜಿದಾರರು ನನ್ನ ಜೊತೆಗೆ ಬರಲು ತಯಾರಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.